## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಡಾ// ರಾಜ್‌ಕುಮಾರ್ ವಾರ್ಡ್ ಸಂಖ್ಯೆ: 106**

ಸಂ : ಸ.ಅ(ವಾ–106)/ಪಿ.ಆರ್/ 11 /2021–22 ದಿನಾಂಕ: 23/10/2021

## ವಾರ್ಡ್ ಸಮಿತಿ ಸಭೆಯ ನಡವಳಿ

ದಿನಾಂಕ: 23–10–2021 ರಂದು ವಾರ್ಡ್ ಸಂಖ್ಯೆ: 106 **ಡಾ// ರಾಜ್‌ಕುಮಾರ್ ವಾರ್ಡ್** ನಲ್ಲಿ ಶ್ರೀಮತಿ ಗೀತಾ ಎಲ್, ಕಾರ್ಯಪಾಲಕ ಅಭಿಯಂತರು, ಬಿಬಿಎಂಪಿ ಹಾಗೂ ವಾರ್ಡ್ ನಂ. 106 ರ ನೋಡಲ್ ಅಧಿಕಾರಿಗಳು ಇವರ ಅದ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿ

**ಹಾಜರಿದ್ದ ಅಧಿಕಾರಿ/ನೌಕರರು:–**

1) ಶ್ರೀಮತಿ. ಎನ್. ಅನ್ನಪೂರ್ಣ, ವೈಧ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಅಗ್ರಹಾರ ದಾಸರಹಳ್ಳಿ.
2) ಶ್ರೀ ತೀರ್ಥಪ್ರಸಾದ್, ಎಇಇ, ಘನತ್ಯಾಜ್ಯ ವಿಭಾಗ
3) ಶ್ರೀ ರೇಣುಕಾ ಪ್ರಸಾದ್. ಎ.ಆರ್.ಒ
4) ಶ್ರೀ ರಾಜೇಂದ್ರ ಕಂದಾಯ ಪರಿವೀಕ್ಷಕರು.
5) ಶ್ರೀ. ಅರುಣ್‌ಕುಮಾರ್, ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿ ವಾರ್ಡ್ ನಂ. 106
6) ಶ್ರೀ ನಾಗರಾಜ್. ಕೆ.ಬಿ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್‌ಬಿ
7) ಶ್ರೀ ಆನಂದ್, ಹೆಚ್.ವಿ, ಸಹಾಯಕ ಅಭಿಯಂತರರು, ಬೆಸ್ಕಾಂ
8) ಶ್ರೀ ನಾಗಣ್ಣಗೌಡ, ಹಿರಿಯ ಆರೋಗ್ಯ ಪರಿವೀಕ್ಷಕರು
9) ಶ್ರೀ ರಂಗನಾಥ್, ಕಿರಿಯ ಆರೋಗ್ಯ ಪರಿವೀಕ್ಷಕರು
10) ಶ್ರೀ ಸೈಯದ್ ಜಮೀಲ್, ಕಿರಿಯ ಅಭಿಯಂತರರು, ಬೀದಿ ದೀಪಗಳು

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಅಧಿಕಾರಿಗಳು/ಹಾಜರಿದ್ದವರೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

- ಸಭೆಯಲ್ಲಿ ಈ ಹಿಂದೆ ಕೈಗೊಂಡ ನಿರ್ಣಯಗಳ ಬಗ್ಗೆ ಚರ್ಚಿಸಲಾಯಿತು.
- ಮಾನ್ಯ ಅಧ್ಯಕ್ಷರು ಮಾತನಾಡಿ ಮಳೆ ಹೆಚ್ಚಾಗಿ ಬೀಳುತ್ತಿದ್ದು, ರಸ್ತೆ ಗುಂಡಿಗಳನ್ನು ಶೀಘ್ರವಾಗಿ ಮುಚ್ಚುವಂತೆ ಹಾಗೂ ಜನಗಳ ಮತ್ತು ವಾಹನ ಸವಾರರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಬೇಕೆಂದು ಮಾನ್ಯ ಅಧ್ಯಕ್ಷರು ಸಂಭಂದಿಸಿದ ಅಧಿಕಾರಿಗಳಿಗೆ ತಿಳಿಸಿದರು.

- ವಾರ್ಡ್ ವ್ಯಾಪ್ತಿಯಲ್ಲಿ ಹಳೆ ಕಟ್ಟಡಗಳನ್ನು ಗುರುತಿಸಿ ಅಂತಹ ಕಟ್ಟಡಗಳ ಸ್ಥಿರತೆಯ ಬಗ್ಗೆ ವರದಿ ಪಡೆದುಕೊಂಡು ಮುಂಜಾಗ್ರತಾ ಕ್ರಮಗಳನ್ನು ವಹಿಸಬೇಕೆಂದು ಮಾನ್ಯ ಅಧ್ಯಕ್ಷರು ತಿಳಿಸಿದರು.

- **ಆರೋಗ್ಯ ಇಲಾಖೆ:-** ಮಾನ್ಯ ಅಧ್ಯಕ್ಷರು ವಾರ್ಡ್ ವ್ಯಾಪ್ತಿಯಲ್ಲಿ ಕರೋನಾ ಸೋಂಕಿತರು ಹಾಗೂ ಲಸಿಕೆ ನೀಡಿರುವ ವಿವರಗಳನ್ನು ಶ್ರೀಮತಿ ಎನ್. ಅನ್ನಪೂರ್ಣ, ವೈಧ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಅಗ್ರಹಾರ ದಾಸರಹಳ್ಳಿ. ರವರಿಂದ ಪಡೆದುಕೊಂಡರು.

- **ಸ್ವಚ್ಚತೆ ಮತ್ತು ಘನತ್ಯಾಜ್ಯ ವಿಲೇವಾರಿ ಬಗ್ಗೆ:-** ರಾಜಾಜಿನಗರ ಕೈಗಾರಿಕಾ ಪ್ರದೇಶದ ಖಾಲಿ ನಿವೇಶನಗಳಲ್ಲಿ ಕಸವನ್ನು ರಾತ್ರಿ ಸಮಯದಲ್ಲಿ ಬೇರೊಂದು ಕಡೆಯಿಂದ ಬಂದು ಸುರಿಯುತ್ತಿದ್ದು, ಅಕ್ಕಪಕ್ಕದವರು ದೂರು ನೀಡಿರುತ್ತಾರೆ ಮಾನ್ಯ ಅಧ್ಯಕ್ಷರು ಮಾತನಾಡಿ ಕೂಡಲೇ ಕಸವನ್ನು ತೆರವುಗೊಳಿಸುವಂತೆ ಮತ್ತು ಅಂತಹ ಜಾಗಗಳಲ್ಲಿ ಮಾರ್ಷಲ್‌ಗಳು ಕಾರ್ಯನಿರ್ವಹಿಸಿ ದಂಡವಿಧಿಸುವಂತೆ ತಿಳಿಸಿದರು.

- ಹಬ್ಬದ ದಿನಗಳಲ್ಲಿ ಕಸವು ಹೆಚ್ಚು ಸಂಗ್ರಹವಾಗಿದ್ದು ಕೂಡಲೇ ಒಣಕಸ ಹಾಗೂ ಹಸಿಕಸವನ್ನು ಬೇರ್ಪಡಿಸಿ ತೆರವುಗೊಳಿಸುವಂತೆ ಮಾನ್ಯ ಅಧ್ಯಕ್ಷರು ಘನತ್ಯಾಜ್ಯ ಅಧಿಕಾರಿಗಳಿಗೆ ತಿಳಿಸಿದರು.

- ಮಳೆಗಾಲವಿರುವುದರಿಂದ ರಸ್ತೆಗಳಲ್ಲಿ ಸಂಗ್ರಹವಾಗಿರುವ ಮಣ್ಣನ್ನು ಸಿಲ್ಟ್ ಅಂಡ್ ಟ್ರಾಕ್ಟರ್‌ಗಳ ಮೂಲಕ ಶೀಘ್ರವಾಗಿ ತೆರವುಗೊಳಿಸುವಂತೆ ಮಾನ್ಯ ಅಧ್ಯಕ್ಷರು ತಿಳಿಸಿದರು.

- **ಬೆಸ್ಕಾಂ/ ಕೆ.ಪಿ.ಟಿ.ಸಿ.ಎಲ್** – ವಾರ್ಡ್ ವ್ಯಾಪ್ತಿಯಲ್ಲಿ ಕೆ.ಪಿ.ಟಿ.ಸಿ.ಎಲ್ ವತಿಯಿಂದ ಹೈಟೆನ್ಷನ್ ಲೈನ್ ಭೂಗತ ಅಳವಡಿಕೆ ಕಾಮಗಾರಿ ಪ್ರಗತಿಯಲ್ಲಿದ್ದು ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸುವಂತೆ ಮತ್ತು ಕತ್ತರಿಸಿರುವ ರಸ್ತೆಗಳನ್ನು ಸುಸ್ಥಿತಿಯಲ್ಲಿಡುವಂತೆ ಅಧಿಕಾರಿಗಳಿ ಮಾನ್ಯ ಅಧ್ಯಕ್ಷರು ತಿಳಿಸಿದರು.

- **ಬಿ.ಡಬ್ಲ್ಯೂ.ಎಸ್.ಎಸ್.ಬಿ** : – ವಾರ್ಡ್ ವ್ಯಾಪ್ತಿಯಲ್ಲಿ ಸಬ್‌ಲೇನ್/ಮೇನ್‌ಲೈನ್ ಮತ್ತು ಮ್ಯಾನ್ ಹೋಲ್ ಅಳವಡಿಕೆಗಾಗಿ ರಸ್ತೆಗಳನ್ನು ಕತ್ತರಿಸಿದ್ದು ಕೂಡಲೇ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಮತ್ತು ಸರಿಯಾದ ರೀತಿಯಲ್ಲಿ ಗುಂಡಿಗಳನ್ನು ಮುಚ್ಚಿ ಸಾರ್ವಜನಿಕರ ಓಡಾಟಕ್ಕೆ ಅನುಕೂಲ ಮಾಡಬೇಕೆಂದು ಮಾನ್ಯ ಅಧ್ಯಕ್ಷರು ತಿಳಿಸಿದರು.

- **ಬೀದಿದೀಪಗಳು :** ವಾರ್ಡ್ ವ್ಯಾಪ್ತಿಯ 9ನೇ ಅಡ್ಡರಸ್ತೆ ಬಸವೇಶ್ವರನಗರ ಪೋಲಿಸ್ ಠಾಣೆಯ ಹಿಂಭಾಗ ಬೀದಿದೀಪಗಳು ಉರಿಯುತ್ತಿಲ್ಲವೆಂದು ಸ್ಥಳೀಯ ನಿವಾಸಿಗಳು ದೂರು ನೀಡಿರುತ್ತಾರೆ. ಮಾನ್ಯ ಅಧ್ಯಕ್ಷರು ಕೂಡಲೇ ಕ್ರಮವಹಿಸುವಂತೆ ಸಂಭಂದಿಸಿದ ಅಧಿಕಾರಿಗೆ ತಿಳಿಸಿದರು.

- ವಾರ್ಡ್ ವ್ಯಾಪ್ತಿಯ ಬಿಬಿಎಂಪಿ ಕಟ್ಟಡಗಳನ್ನು ಮಳೆಗಾಲವಿರುವುದರಿಂದ ಸರಿಯಾಗಿ ನಿರ್ವಹಿಸುವಂತೆ ಮಾನ್ಯ ಅಧ್ಯಕ್ಷರು ಸೂಚಿಸಿದರು.

ಅಂತಿಮವಾಗಿ ನೋಡಲ್ ಅಧಿಕಾರಿಗಳು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದು ಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಳ್ಳಲು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸುಲು ಸೂಚಿಸಿ ಮುಂದಿನ ಸಭೆಗೆ ಎಲ್ಲಾ ಅಧಿಕಾರಿ ಸಿಬ್ಬಂದಿಗಳು ಹಾಜರಿರಲು ತಿಳಿಸಿ ಸಭೆಯನ್ನು ಮುಕ್ತಾಯ ಮಾಡಿದರು.

28/10/21

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ.106 ಡಾ//ರಾಜ್‌ಕುಮಾರ್ ವಾರ್ಡ್
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

28/10/21

for ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್ ನೋಡಲ್ ಅಧಿಕಾರಿಗಳು
ವಾರ್ಡ್ ನಂ.106 ಡಾ//ರಾಜ್‌ಕುಮಾರ್ ವಾರ್ಡ್
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

1) ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2) ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3) ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4) ಜಂಟಿ ಆಯುಕ್ತರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸಿದೆ.
5) ಮುಖ್ಯ ಅಭಿಯಂತರರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸಿದೆ.
6) ಅಧೀಕ್ಷಕ ಅಭಿಯಂತರರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸಿದೆ.
7) ಕಾರ್ಯಪಾಲಕ ಅಭಿಯಂತರರು (ಗೋವಿಂದರಾಜನಗರ) ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರ ಮಾಹಿತಿಗಾಗಿ ಕಳುಹಿಸಿದೆ.
9) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂಎಸ್.ಎಸ್.ಬಿ ರವರ ಮಾಹಿತಿಗಾಗಿ ಕಳುಹಿಸಿದೆ